**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 76/2020**

**ಚಾ.ಸಾಃ1, ಫ್ರಾ.ಸಾಃ1**

| | |
|---|---|
| ಸಾಕ್ಷಿದಾರನ ಹೆಸರು | ರಮೇಶ ಹೆಗಡೆ |
| ತಂದೆಯ ಹೆಸರು | ಮಹಾಬಲೇಶ್ವರ ಹೆಗಡೆ |
| ವಯಸ್ಸು | 59 ವರ್ಷಗಳು |
| ಉದ್ಯೋಗ | ಪೋಸ್ಟ್‌ಮಾಸ್ಟರ್, ಹಳದೀಪುರ ಅಂಚೆಕಚೇರಿ |
| ವಾಸ್ತವ್ಯ | ಬಾದಳ್ಳಿ, ನವಿಲಗೋಣ |

**ಸಾಕ್ಷಿಯನ್ನು ದಿನಾಂಕಃ 03-06-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 07-03-2020ರಂದು ನಾನು ಮತ್ತು ನನ್ನ ಹೆಂಡತಿಯಾದ ಸಾವಿತ್ರಿ ರಮೇಶ ಹೆಗಡೆಯವರು ನಮ್ಮ ಕೆಲಸದ ನಿಮಿತ್ತ ಬೆಂಗಳೂರಿಗೆ ಹೋಗಿದ್ದೆವು. ಹೋಗುವ ಪೂರ್ವದಲ್ಲಿ ನಮ್ಮ ಮನೆಯ ಮುಂದಿನ, ಹಿಂದಿನ ಮತ್ತು ಮಹಡಿಯ ಮೇಲಿನ ಬಾಗಿಲುಗಳಿಗೆ ಬೀಗವನ್ನು ಹಾಕಿ ಹೋಗಿದ್ದೆವು. ದಿನಾಂಕ 09-03-2020ರಂದು ಬೆಳಿಗ್ಗೆ 07-30ರ ಸಮಯಕ್ಕೆ ನಾವು ಬೆಂಗಳೂರಿನಿಂದ ವಾಪಸ್ಸು ಬಂದು ಮನೆಗೆ ಹೋಗಿ ನೋಡಲಾಗಿ ಮುಂದಿನ ಬಾಗಿಲು ಸರಿಯಾಗಿತ್ತು. ವಾಡಿಕೆಯಂತೆ ನಾನು ಹಿಂದಿನ ಬಾಗಿಲ ಬಳಿ ಹೋಗಿ ನೋಡಲಾಗಿ ಅದು ತೆರೆದಿತ್ತು. ಮುಂದಿನ ಬಾಗಿಲ ಬೀಗವನ್ನು ತೆರೆದು ಮನೆಯ ಒಳಗೆ ಹೋಗಿ ನೋಡಲಾಗಿ ನಮ್ಮ ಬೆಡ್ ರೂಮಿನಲ್ಲಿದ್ದ ಒಂದು ಅಲ್ಮೆರಾದ ಬಾಗಿಲು ತೆರೆದಿತ್ತು. ಅದೇ ರೀತಿ ಅದರ ಒಳಗಿನ ಲಾಕರ್ ಸಹ ತೆರೆದಿತ್ತು. ಮಹಡಿ ಮೇಲಿನ ಸಿಮೆಂಟ್ ಬಾಗಿಲು ಹಾಗೂ ಅದರ ಒಳಗಿನ ಬಾಗಿಲನ್ನು ಯಾರೋ ಕಳ್ಳರು ಒಡೆದು ಒಳಗೆ ಬಂದಿದ್ದರು. ಅಲ್ಮೆರಾದ ಲಾಕರನಲ್ಲಿದ್ದ ಚಿನ್ನದ ಆಭರಣಗಳು ಕಾಣಲಿಲ್ಲ. ಘಟನೆಯ ಬಗ್ಗೆ ನಾನು ಪೋಲಿಸರಿಗೆ ಹೇಳಿರುತ್ತೇನೆ. ನಂತರ ಪೋಲಿಸರು ಶ್ವಾನದಳ ಮತ್ತು ಬೆರಳಚ್ಚುಗಾರರ ಸಮೇತ ನನ್ನ ಮನೆಗೆ ಬಂದು ಜಾಗವನ್ನು ಪರಿಶೀಲಿಸಿರುತ್ತಾರೆ. ನನ್ನ ಮನೆಯಲ್ಲಿ ಕಳ್ಳತನವಾದ ಸಾಮಾನುಗಳ ವಿವರವನ್ನು ಪೋಲಿಸರಿಗೆ ಹೇಳಿರುತ್ತೇನೆ. ಈ ಕೆಳಗಿನ ಆಭರಣಗಳು ಕಳ್ಳತನವಾಗಿರುತ್ತದೆ.

1) ಲಾಕೆಟ್ ಇರುವ ಒಂದು ಎಳೆಯ ಚಿನ್ನದ ಕರಿಮಣಿ ಸರ.

2) 2 ಚಿನ್ನದ ಸರಗಳು,

3) ಒಂದು ಮುತ್ತಿನ ಹಾರ,

4) ಒಂದು ನೆಕ್ಲೇಸ್,

5) 2 ಜೊತೆ ಚಿನ್ನದ ಬಳೆಗಳು

6) ಒಂದು ಸಣ್ಣ ಹರಳಿನ ಉಂಗುರ
7) ಒಂದು ದೊಡ್ಡ ಹರಳಿನ ಉಂಗುರ
8) ಒಂದು ಪವಿತ್ರ ಉಂಗುರ
9) 2 ಜೊತೆ ಕಿವಿಯೋಲೆ
10) ಒಂದು ಜೊತೆ ಮಾಟಿ, ಒಂದು ಜೊತೆ ಮೇಗಾ, ಒಂದು ಜೊತೆ ಪ್ಲೇಟ್
11) ಒಂದು ಜೊತೆ ಹರಳಿನ ಕುಡುಕು
12) 8 ಅಷ್ಟಪಟ್ಟಿ ಗುಂಡುಗಳು
13) ಒಂದು ಚಿನ್ನದ ನಾಣ್ಯ

ಕಳ್ಳತನದ ಬಗ್ಗೆ ನಾನು ಪೋಲಿಸರಿಗೆ ಪಿರ್ಯಾದನ್ನು ನೀಡಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಿರ್ಯಾದನ್ನು ಗುರುತಿಸಿದ್ದರಿಂದ ಅದನ್ನು ನಿಪಿ-1 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪೋಲಿಸರು ಸಾಯಂಕಾಲ 05-00 ರಿಂದ 06-00ರ ಸಮಯದಲ್ಲಿ ಸ್ಥಳದಲ್ಲಿ ಪಂಚನಾಮೆ ಮಾಡಿ ಹಾತ್ ನಕಾಶೆ ತಯಾರಿಸಿ, ಛಾಯಾಚಿತ್ರ ತೆಗೆದಿರುತ್ತಾರೆ. ಆ ಸಂದರ್ಭದಲ್ಲಿ ನಾನು, ನನ್ನ ಹೆಂಡತಿ, ಪೋಲಿಸರು ಮತ್ತು ಪಂಚರಾದ ಚಾಸಾ-2 ಮತ್ತು 3 ಹಾಜರಿದ್ದರು. ನಾನು ಪೋಲಿಸರಿಗೆ ಸ್ಥಳವನ್ನು ತೋರಿಸಿರುತ್ತೇನೆ. ಪಂಚನಾಮೆ ಮತ್ತು ಕಚ್ಚಾ ನಕಾಶೆ ಮೇಲೆ ನಾನು ಸಹಿ ಮಾಡಿದ್ದು ಅವುಗಳನ್ನು ಮತ್ತು ಛಾಯಾಚಿತ್ರವನ್ನು ಗುರುತಿಸುತ್ತೇನೆ. ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ನಿಪಿ-2 ಮತ್ತು 3 ಹಾಗೂ ಅವುಗಳ ಸಾಕ್ಷಿ ಸಹಿಗಳನ್ನು ನಿಪಿ-2(ಎ) ಮತ್ತು 3(ಎ) ಹಾಗೂ 2 ಛಾಯಾಚಿತ್ರಗಳನ್ನು ನಿಪಿ-4 ರಿಂದ 7 ಎಂದು ಗುರುತಿಸಲಾಯಿತು.

ದಿನಾಂಕ 04-08-2020 ರಂದು ನಾನು ಮನೆಯಲ್ಲಿದ್ದಾಗ ಪೋಲಿಸರು ಇಬ್ಬರು ವ್ಯಕ್ತಿಗಳನ್ನು ಕರೆತಂದು ಇವರು ನಿಮ್ಮ ಮನೆಯಲ್ಲಿ ಕಳ್ಳತನ ಮಾಡಿರುವ ವ್ಯಕ್ತಿಗಳು ಎಂದು ತಿಳಿಸಿ ಅವರು ಯಾವ ರೀತಿ ಕಳ್ಳತನ ಮಾಡಿದರು ಎನ್ನುವುದನ್ನು ತೋರಿಸುತ್ತಾರೆ ಎಂದು ತಿಳಿಸಿರುತ್ತಾರೆ. ನಾನು ಅವರನ್ನು ವಿಚಾರಿಸಿದಾಗ ಹಿಂದಿನ ಕಿಟಕಿಯ ಸಜ್ಜಾದ ಮೇಲೆ ಹತ್ತಿ ಮಾಳಿಗೆಯ ಮೇಲೆ ಹೋಗಿ ಸಿಮೆಂಟ್ ಬಾಗಿಲು ಮತ್ತು ಮತ್ತೊಂದು ಬಾಗಿಲನ್ನು ಒಡೆದು ಒಳಪ್ರವೇಶಿಸಿ ಬೆಡ್ ರೂಮಿಗೆ ಹೋಗಿ ಅಲ್ಮೆರಾ ಓಪನ್ ಮಾಡಿ ಅದರ ಒಳಗೆ ಇದ್ದ ಚಿನ್ನವನ್ನು ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾರೆ.

ದಿನಾಂಕ 05-08-2020 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಸಿಕ್ಕಿದ ಆಭರಣಗಳನ್ನು ತೋರಿಸಿರುತ್ತಾರೆ. ಆಭರಣಗಳನ್ನು ನಾನು ಗುರುತಿಸಿರುತ್ತಾರೆ. ಪೋಲಿಸರು ಠಾಣೆಯಲ್ಲಿ ಈ ಕೆಳಕಂಡ ಆಭರಣಗಳನ್ನು ತೋರಿಸಿರುತ್ತಾರೆ.

1) ಲಾಕೆಟ್ ಇರುವ ಒಂದು ಎಳೆಯ ಚಿನ್ನದ ಕರಿಮಣಿ ಸರ.

2) 2 ಚಿನ್ನದ ಸರಗಳು,

3) ಒಂದು ಮುತ್ತಿನ ಹಾರ,

4) ಒಂದು ನೆಕ್ಲೇಸ್,

5) 8 ಅಷ್ಟಪಟ್ಟಿ ಗುಂಡುಗಳು

6) ಒಂದು ಜೊತೆ ಚಿನ್ನದ ರಿಂಗ್

7) ಒಂದು ಜೊತೆ ಮಾಟಿ, ಒಂದು ಜೊತೆ ಮೇಗಾ, ಒಂದು ಜೊತೆ ಪ್ಲೇಟ್

8) ಒಂದು ಪವಿತ್ರ ಉಂಗುರ

9) ಒಂದು ಸಣ್ಣ ಹರಳಿನ ಉಂಗುರ

10) ಒಂದು ದೊಡ್ಡ ಹರಳಿನ ಉಂಗುರ

11) 2 ಜೊತೆ ಕಿವಿಯೋಲೆ

12) ಒಂದು ಚಿನ್ನದ ನಾಣ್ಯ

ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

(ಈ ಪ್ರಕರಣದ ಮುದ್ದೆ ಮಾಲುಗಳನ್ನು ತನಿಖಾಧಿಕಾರಿಯು ಹಾಜರು ಮಾಡಿರುವುದಿಲ್ಲ. ಆದ್ದರಿಂದ ಮುದ್ದೆ ಮಾಲುಗಳ ಗುರುತಿಸುವಿಕೆಗಾಗಿ ಸಾಕ್ಷಿ ವಿಚಾರಣೆಯನ್ನು ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**